*(ಸಾಕ್ಷಿಯನ್ನು ದಿನಾಂಕಃ-08-01-2021 ರಂದು ಸಾಕ್ಷಿಗೆ ಸತ್ಯಪ್ರಮಾಣ ಭೋಧಿಸಲಾಯಿತು)*

ಪಾಟೀ ಸವಾಲು ಶ್ರೀ. ಡಿ ಎ ಹೆಚ್ ಯವರಿಂದ ಃ ಡಿ ಹೆಚ್ ಆರ್ ಪರವಾಗಿ

ನನ್ನ ಗಂಡ ತೀರಿಕೊಳ್ಳುವವರೆಗೆ ಮನೆಯ ಎಲ್ಲಾ ಜವಾಬ್ದಾರಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು ಎನ್ನುವುದು ಸರಿ. ನನ್ನ ಗಂಡ ಬದುಕಿರುವ ವರೆಗೆ ಅವರೇ ಮನೆತನದ ಮುಖ್ಯಸ್ಥರಾಗಿದ್ದರು ಎನ್ನುವುದು ಸರಿ. ನನ್ನ ಗಂಡನಿಗೆ 3 ಎಕರೆ 15 ಗುಂಟೆ ಹೊಲ ಇತ್ತು. ಒಂದು ಮನೆ ಹಾಗೂ ಒಂದು ಟ್ರಾಕ್ಟರ್ ಇತ್ತು. ಮನೆಯು ನನ್ನ ಗಂಡನ ಹೆಸರಿನಲ್ಲಿರುತ್ತದೆ. ಟ್ರಾಕ್ಟರ್ ನನ್ನ ಗಂಡನ ಹೆಸರಿನಲ್ಲಿತ್ತು ಈಗ ನನ್ನ ಮಗ ಉಪಯೋಗಿಸುತ್ತಿದ್ದಾನೆ. ನನ್ನ ಗಂಡ ತೀರಿಕೊಂಡ ನಂತರ ನನ್ನ ಮಗ ಕುಟುಂಬದ ಆಗುಹೋಗು ನೋಡುತ್ತಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಗಂಡನ ಹೊಲ ನನ್ನ ಮಗ ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ. ಹಿಗೇ ಆತ ವರ್ಗಾವಣೆಯನ್ನು ಯಾವಾಗ ಮಾಡಿಕೊಂಡ ಎಂದು ನನಗೆ ಗೊತ್ತಿಲ್ಲ. ಇಲ್ಲಿಯವರೆಗೆ ಸದರಿ ಹೊಲ ಹಾಗೂ ಟ್ರಾಕ್ಟರ್ ನನ್ನ ಮಗನ ಹೆಸರಿನಲ್ಲೇ ಇದೆ ಎನ್ನುವುದು ನಿಜ. ಹಾಲಸಮುದ್ರ ಗ್ರಾಮದಲ್ಲಿ ಇರುವ ಸರ್ವೆ ನಂಃ 66 ರಲ್ಲಿರುವ 4 ಎಕರೆ 22 ಗುಂಟೆ ಜಮೀನು ಮೊದಲು ನನ್ನ ಗಂಡನ ಹೆಸರಿನಲ್ಲಿತ್ತು ಈಗ ನನ್ನ ಮಗನ ಹೆಸರಿಗೆ ಹೋಗಿದೆ. ಮರ್ಲಾನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂಃ 55/1 ಜಮೀನು ಯಾರ ಹೆಸರಿನಲ್ಲಿದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮರ್ಲಾನಹಳ್ಳಿಯಲ್ಲಿ ಯಾವುದೇ ಭೂಮಿ ಇಲ್ಲ ಎಂದು ಹೇಳುತ್ತಾರೆ. ಸದರಿ ಹೊಲವು ಲಕ್ಷ್ಮಿ ಹೆಸರಿನಲ್ಲಿ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ಹೊಲವನ್ನು 20 ವರ್ಷದ ಹಿಂದೆ ನನ್ನ ಮಗ ಮಾಡಿದ್ದಾನೆ ಎಂದು ಹೇಳುತ್ತಾರೆ. ನನ್ನ ಗಂಡ ತೀರಿಕೊಂಡ ನಂತರ ಆತನ ಆಸ್ತಿಗಳು ನನ್ನ ಮಗನನ ಹೆಸರಿಗೆ ಹೋಗಿವೆ ಎನ್ನುವುದು ನಿಜ. ನನ್ನ ಮಗ ಹೊಲಗಳನ್ನು ತನ್ನ ಹೆಸರಿಗೆ ಮಾಡಿರುವುದನ್ನು ನಾನು ಎಲ್ಲೂ ಪ್ರಶ್ನಿಸಿಲ್ಲ ಎನ್ನುವುದು ನಿಜ. ನನ್ನ ಮಗ ಹೊಲಗಳ ಮೇಲೆ ಸಾಲ ಮಾಡಿರುವುದು ನಾನು ಎಲ್ಲೂ ಪ್ರಶ್ನಿಸಿಲ್ಲ ಯಾಕೆಂದರೆ ನನಗೆ ಅದು ಗೊತ್ತೇ ಇಲ್ಲಾ. ನನ್ನ ಮಗ ಮಾರಾಟ ಮಾಡಿದ್ದೂ ಕೂಡು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಲಾಗಿದೆ ಕೊಡಲಾಗಿದೆ.

(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಗಂಗಾವತಿ.